ವಿವಿಧ ಅಕಾಡಮಿಗಳ ಪ್ರಶಸ್ತಿ ಹಾಗೂ ಸನ್ಮಾನಗಳು

170(1202); ಶ್ರೀ ಅರವಿಂದ ಚಂದ್ರಕಾಂತ ಬೆಲ್ಲದ (ಹುಬ್ಬಳ್ಳಿ–ಧಾರವಾಡ ಪಶ್ಚಿಮ)

ಅ) ರಾಜ್ಯದಲ್ಲಿ ವಿವಿಧ ರೀತಿಯ ಅಕಾಡೆಮಿಗಳ ಪ್ರಶಸ್ತಿ/ಸನ್ಮಾನ ನೀಡುವ ಸಂದರ್ಭಗಳಲ್ಲಿ ಸಣ್ಣ ಪ್ರಮಾಣದ ಹಣವನ್ನು ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ರೀತಿಯ ಸಣ್ಣ ಪ್ರಮಾಣದ ಹಣವನ್ನು ನೀಡುತ್ತಿರುವುದರಿಂದ ಕಲಾವಿದರಿಗೆ ಅವಮಾನ ಮಾಡಿದಂತಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಇಂತಹ ಸನ್ನಿವೇಶಗಳನ್ನು ತಪ್ಪಿಸಲು ಸರ್ಕಾರ ಯಾವ ರೀತಿಯ ಕ್ರಮಗಳನ್ನು ಕೈಗೊಂಡಿದೆ (ಮಾಹಿತಿ ಒದಗಿಸುವುದು)?

ಶ್ರೀಮತಿ ಉಮಾಶ್ರೀ (ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು)

ಅ) ಹೌದು.

ಆ) **ಮತ್ತು** ಇ) ರಾಜ್ಯದ ವಿವಿಧ ಅಕಾಡೆಮಿಗಳು ನೀಡುವ ಪ್ರಶಸ್ತಿ ಮೊತ್ತವನ್ನು ಸರ್ಕಾರದ ಆದೇಶ ಸಂಖ್ಯೆ: ಕಸಂವಾ 845 ಕಸದ 2014 ದಿನಾಂಕ: 6–12–2014ರಲ್ಲಿ ಈ ಕೆಳಕಂಡಂತೆ ಹೆಚ್ಚಿಸಿದೆ.

ಪ್ರಶಸ್ತಿಯ ಹೆಸರು	ಹಿಂದೆ ನೀಡಲಾಗುತ್ತಿದ್ದ ಮೊತ್ತ	2015–16ನೇ ಸಾಲಿನಿಂದ ನೀಡಲು ಪರಿಷ್ಕರಿಸಿದ ಮೊತ್ತ
ಗೌರವ ಪ್ರಶಸ್ತಿ	10000/–	50000/–
ಪುಸ್ತಕ ಪ್ರಶಸ್ತಿ	5000/–	25000/–
ವಾರ್ಷಿಕ ಪ್ರಶಸ್ತಿ	5000/–	25000/–